**5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಶಿವಮೊಗ್ಗ (ಪೀಠಾಸೀನ, ಸಾಗರ)**

**ಎಸ್.ಸಿ. ಸಂಃ**10006/2023

ಪಿಡಬ್ಲೂ- 08

ಸಿಡಬ್ಲೂ- 08

ಸಾಕ್ಷಿ ಹೆಸರು - ಬಿ. ಶಿವಾನಂದ

ತಂದೆ ಹೆಸರು - ಬಂಗಾರಪ್ಪ

ವಯಸ್ಸು - 52 ವರ್ಷ

ಉದ್ಯೋಗ - ಕೂಲಿ ಕೆಲಸ

ವಾಸಃ - ರಿಪ್ಪನ್ ಪೇಟೆ, ಹೊಸನಗರ ತಾಲ್ಲೂಕು

**ಪ್ರಮಾಣ ವಚನ ಭೋದಿಸಿದ ದಿನಾಂಕಃ 06-08-2025.**

**ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರವರಿಂದಃ**

ಚಾಸಾ2 ನನ್ನ ಅಣ್ಣ, ಚಾಸಾ1 ನನ್ನ ಅಣ್ಣನ ಮಗ. ಚಾಸಾ7 ರವರ ಪರಿಚಯ ಇದೆ. ಆರೋಪಿತರು ಪರಿಚಯ ಇರುತ್ತಾರೆ. ಅವರು ನನ್ನ ಅಣ್ಣನ ಮನೆಯ ಪಕ್ಕದಲ್ಲಿ ವಾಸ ಮಾಡಿಕೊಂಡಿರುತ್ತಾರೆ. ಪೋಲೀಸರು ಈ ಪ್ರಕರಣದಲ್ಲಿ ಪಂಚನಾಮೆ ಮಾಡಿರುವ ಬಗ್ಗೆ ಗೊತ್ತು.

ದಿನಾಂಕಃ 07-03-2022 ರಂದು ಬೆಳಿಗ್ಗೆ 10-00 ಗಂಟೆಗೆ ನಾನು ಚಾಸಾ2 ಲೋಕೇಶನ ಮನೆಗೆ ಹೋಗಿರುತ್ತೇನೆ. ಅಲ್ಲಿಗೆ ಸೊರಬ ಪೋಲೀಸರು ಬಂದಿದ್ದರು. ಸ್ಥಳದಲ್ಲಿ ಪಂಚನಾಮೆ ಮಾಡುವ ಸಲುವಾಗ ಪೋಲೀಸರು ನನಗೆ ನೋಟೀಸ್ ಕೊಟ್ಟಿರುತ್ತಾರೆ. ಈಗ ತೋರಿಸಿದ ನಿಪಿ 8 ಸದರಿ ನೋಟೀಸ್ ಆಗಿರುತ್ತದೆ ಅದರಲ್ಲಿ ನನ್ನ ಸಹಿ ಇರುತ್ತದೆ. ಸಾಕ್ಷಿಯ ಸಹಿಯನ್ನು ನಿಪಿ 8(ಸಿ) ಎಂದು ಗುರುತಿಸಲಾಯಿತು.

ಚಾಸಾ2 ಮತ್ತು ಆರೋಪಿತರ ನಡುವೆ ಗಲಾಟೆಯಾದ ಹಿನ್ನೆಲೆಯಲ್ಲಿ ಪೋಲೀಸರು ಚಾಸಾ2 ರವರ ಮನೆಯ ಹತ್ತಿರ ಬಂದಿದ್ದರು. ಚಾಸಾ2 ರವರ ಮನೆಯ ಹಿಂಭಾಗ ಇರುವ ಖಾಲಿ ಜಾಗದಲ್ಲಿ ನನ್ನ ಅತ್ತಿಗೆ ಚಾಸಾ3 ರವರು ಸಗಣಿ ಸಾರಿಸಬೇಕಾದರೆ ಗಲಾಟೆ ಆಗಿರುತ್ತದೆ. ಗಲಾಟೆಯಾದ ಸ್ಥಳವನ್ನು ಪೋಲೀಸರಿಗೆ ಚಾಸಾ2 ರವರು ತೋರಿಸಿರುತ್ತಾರೆ. ಚಾಸಾ2 ರವರು ಕತ್ತಿಯನ್ನು ಪೋಲೀಸರ ಮುಂದೆ ಹಾಜರುಪಡಿಸಿ ಆರೋಪಿತರು ತನಗೆ ಮತ್ತು ತನ್ನ ಮಗನಿಗೆ ಸದರಿ ಕತ್ತಿಯಿಂದ ಹಲ್ಲೆ ಮಾಡಿರುತ್ತಾರೆ ಎಂದು ತಿಳಿಸಿದರು. ಪೋಲೀಸರು ಸದರಿ ಕತ್ತಿಯನ್ನು ಒಂದು ಬಟ್ಟೆಯಲ್ಲಿ ಹಾಕಿ ಅಮಾನತ್ತುಪಡಿಸಿಕೊಂಡಿರುತ್ತಾರೆ. ಪೋಲೀಸರು ಬೆಳಿಗ್ಗೆ 11 ಗಂಟೆಯಿಂದ 12 ಗಂಟೆ ವರೆಗೆ ಮಹಜರ್ ಕ್ರಮ ಜರುಗಿಸಿರುತ್ತದೆ. ಈಗ ತೋರಿಸಿದ ನಿಪಿ5 ಸದರಿ ಮಹಜರ್

ದಾಖಲೆ ಆಗಿರುತ್ತದೆ ಅದರಲ್ಲಿ ನನ್ನ ಸಹಿ ಇರುತ್ತದೆ. ಸಾಕ್ಷಿಯ ಸಹಿಯನ್ನು ನಿಪಿ5(ಸಿ) ಎಂದು ಗುರುತಿಸಲಾಯಿತು. ಪೋಲೀಸರು ಮಹಜರ್ ಮಾಡುವ ಸಮಯದಲ್ಲಿ ಫೋಟೋ ತೆಗೆದಿರುತ್ತಾರೆ. ಈಗ ತೋರಿಸಿದ ನಿಪಿ 6 ಮತ್ತು ನಿಪಿ 7 ಸ್ಥಳದಲ್ಲಿ ತೆಗೆದ ಫೋಟೋ ಆಗಿರುತ್ತವೆ. ಈಗ ತೋರಿಸಿದ ಮು ಮಾ 4 ಆ ದಿವಸ ಚಾಸಾ2 ರವರು ಪೋಲೀಸರಿಗೆ ನೀಡಿದ ಕತ್ತಿಯಾಗಿರುತ್ತದೆ. ಮು ಮಾ 4 ರ ಮೇಲೆ ಅಂಟಿಸಿರುವ ಚೀಟಿಯ ಮೇಲೆ ನನ್ನ ಸಹಿ ಇರುತ್ತದೆ. ನಿಪಿ5 ಕ್ಕೆ ನನ್ನ ಜೊತೆ ಚಾಸಾ7 ಮತ್ತು ಚಾಸಾ2 ರವರು ಸಹಿ ಹಾಕಿರುತ್ತಾರೆ.

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಈ ಎನ್ ವಕೀಲರಿಂದಃ</u>**

ಚಾಸಾ2 ರವರು ನನಗೆ ತಮ್ಮ ಮನೆಯ ಹತ್ತಿರ ಬರಲು ಹೇಳಿರುತ್ತಾರೆ. ನಿಪಿ 6 ಮತ್ತು ನಿಪಿ7 ಫೋಟೋಗಳಲ್ಲಿ ನೀರಿನ ಟ್ಯಾಂಕ್ ಮತ್ತು ನೀರಿನ ಒಲೆ ಕಾಣುತ್ತಿಲ್ಲ ಎಂದರೆ ಸರಿ. ನಿಪಿ 5 ದಾಖಲೆಯನ್ನು ನಾನು ಹೇಳಿ ಬರೆಸಿರುವುದಿಲ್ಲ. ಪೋಲೀಸರು ಸ್ಥಳದಲ್ಲಿ ನಕಾಶೆಯನ್ನು ತಯಾರು ಮಾಡಿರುವುದಿಲ್ಲ. ಚಾಸಾ2 ಮತ್ತು ಆರೋಪಿತರ ನಡುವೆ ಜಾಗದ ವಿಚಾರದಲ್ಲಿ ತಕರಾರು ಇರುತ್ತದೆ ಎಂದರೆ ಸರಿ. ನಾನು ನನ್ನ ಅಣ್ಣ ಚಾಸಾ2 ರವರಿಗೆ ಸಹಾಯ ಮಾಡಲೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೋಲೀಸರು ನನ್ನ

ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಳ್ಳದಿದ್ದರೂ ಸಹ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯ ಪ್ರಕಾರ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಣಗೊಳಿಸಲಾಯಿತು)

ಓ ಹೇ ಕೇ ಸ ಇದೆ

5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಶಿವಮೊಗ್ಗ (ಪೀಠಾಸೀನ, ಸಾಗರ).